**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ</u>**

**ಸಿ.ಸಿ.ನಂ ಃ 947/2021**

**ಪಿಡಬ್ಲು-11**
**ಸಿಡಬ್ಲು- 14**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಡಾ|| ಎ ಬಿ ತಮ್ಮಯ್ಯ |
| ತಂದೆಯ ಹೆಸರು | ಃ | ಲೇಟ್ ಎ ಕೆ ಬೆಳ್ಳಿಯಪ್ಪ |
| ವಯಸ್ಸು | ಃ | 59 ವರ್ಷ |
| ವೃತ್ತಿ | ಃ | ಉಪ ನಿರ್ದೇಶಕರು, ಜಿಲ್ಲಾ ಪಾಲಿ ಕ್ಲಿನಿಕ್, ಮಂಗಳೂರು |
| ವಾಸಸ್ಥಳ | ಃ | ಮಂಗಳೂರು |

**<u>ದಿನಾಂಕ ಃ 17-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಃ ಮಾನ್ಯ ಸ. ಸ. ಅ. ರವರಿಂದ ಃ -</u>**

ನಾನು 2018 ನೇ ಇಸವಿಯ ಫೆಬ್ರುವರಿ ತಿಂಗಳಿನಿಂದ ದಿನಾಂಕ 01-06-2022 ರವರೆಗೆ ಮಾಲ್ದಾರೆ ಪಶು ಚಿಕಿತ್ಸಾಲಯದಲ್ಲಿ ಪಶು ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 13-05-2021 ರಂದು ಸಿದ್ದಾಪುರ ಪೋಲಿಸರ ಕೋರಿಕೆಯ ಮೇರೆಗೆ ಬಾಡಗ ಬಾಣಾಂಗಾಲ ಗ್ರಾಮದ ಬಿಬಿಟಿಸಿ ಕಾಫೀ ತೋಟದ ಕಾಲು ರಸ್ತೆಯ ಬಳಿ ಇದ್ದಿದ್ದ, ಒಂದು ಪ್ರಾಣಿಯ ಭಾಗಗಳನ್ನು ಪರೀಕ್ಷಿಸಿದ್ದು, ಆ ರೀತಿ ಪರೀಕ್ಷಿಸಿದಾಗ ಒಂದು ಹಸುವಿನ ಭಾಗಗಳೆಂದು ಕಂಡು ಬಂದಿದ್ದು, ಆ ಬಗ್ಗೆ ಪರೀಕ್ಷಿಸಿ ದಿನಾಂಕ 14-05-2021 ರಂದು ಈ ಬಗ್ಗೆ ದೃಡೀಕರಣ ಪತ್ರ ನೀಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ತಾನು ಮೇಲೆ ಹೇಳಿದಂತೆ ನೀಡಿದ ದೃಢೀಕರಣ ಪತ್ರ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ದೃಢೀಕರಣ ಪತ್ರವನ್ನು ನಿಪಿ19 ಎಂದು, ಸಾಕ್ಷಿಯ ಸಹಿಯನ್ನು ನಿಪಿ19(ಎ) ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲು ಃ ಶ್ರೀ. ಎ ಎಂ ಎಲ್ ಆರೋಪಿಗಳ ಪರ ವಕೀಲರಿಂದ ಃ</u>**

ಯಾವುದೇ ಹಸುವನ್ನು ತರುವಾಗ ಅವುಗಳ ಕಿವಿಗೆ ಹಳದಿ ಬಣ್ಣದ ಗುರುತಿನ ನಂಬರ್ ಇರುವ ಪಾಸ್ಟಿಕ್ ಓಲೆಯು ಇರುತ್ತದೆ ಎಂದರೆ ಸಾಕ್ಷಿಯು ಸದರಿ ಪ್ರಕ್ರಿಯೆಯು ಈಗ ನಡೆಯುತ್ತಿದ್ದು, ಆದರೆ ಎಲ್ಲಾ ಪ್ರಕರಣದಲ್ಲಿ ಆ ರೀತಿ ಕಿವಿಯ

ಒಲೆ ಇರುವುದಿಲ್ಲವೆಂದು ನುಡಿಯುತ್ತಾರೆ. ಕಾಡುಕೋಣ ಹಾಗೂ ಹಸುವಿನ ದೇಹದ ಭಾಗಗಳು ಒಂದೇ ರೀತಿ ಇರುತ್ತವೆ ಎಂದರೆ ಸರಿಯಲ್ಲ. ನಾನು ಸದರಿ ಪ್ರಾಣಿಯ ದೇಹವನ್ನು ವೈಜ್ಞಾನಿಕವಾಗಿ ಪರೀಕ್ಷಿಸಿರುವುದಿಲ್ಲ, ಆದರೆ ಭೌತಿಕವಾಗಿ ಪರಿಶೀಲಿಸಿ ಪರೀಕ್ಷಿಸಿರುತ್ತೇನೆ. ನಾನು ಯಾವುದೇ ಹಸುವಿನ ಭಾಗವನ್ನು ಪರೀಕ್ಷಿಸಿ ದೃಢೀಕರಣ ಪತ್ರ ನೀಡಿರುವುದಿಲ್ಲ ಬದಲಾಗಿ ಪೋಲಿಸರ ಕೋರಿಕೆಯ ಮೇರೆಗೆ ನಿಪಿ19 ದೃಢೀಕರಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ವಿರಾಜಪೇಟೆ.